ಬಾಲಿವುಡ್

# 'ಸ್ಟಂಟ್' ಪ್ರವೀಣೆ ಸಮೀರಾ

'ದಕ್ಷಿಣ ಭಾರತದ ಸಿನಿಮಾ ಉದ್ಯಮದಲ್ಲಿ ನಿಯತ್ತಿದೆ'– ತಮ್ಮ ಆಕರ್ಷಕ ಕಣ್ಣುಗಳನ್ನು ಇನ್ನಷ್ಟು ದೊಡ್ಡದಾಗಿ ಅರಳಿಸಿ ಉಲಿದರು ಸಮೀರಾ ರೆಡ್ಡಿ.

'ಹಾಗಾದರೆ ಬಾಲಿವುಡ್?'

'ಅದು ನಂಗೆ ಐಡೆಂಟಿಟಿ ಕೊಟ್ಟಿದೆ. ಎಷ್ಟೆಂದರೂ ಬಾಲಿವುಡ್ ರಾಷ್ಟ್ರಮಟ್ಟದ್ದಲ್ಲವೇ' ಎಂದು ಅಲೆಗೂದಲನ್ನು ಸರಿಪಡಿಸಿಕೊಂಡರು.

ಎಂಎಸ್‌ಡಿ ಇಂಡಿಯಾ ಗರ್ಭ ಕೊರಳಿನ ಕ್ಯಾನ್ಸರ್ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಹಮ್ಮಿಕೊಂಡಿರುವ 'ಗಾರ್ಡ್ ಯುವರ್‌ಸೆಲ್ಫ್' ಕಾರ್ಯಕ್ರಮಕ್ಕೆ ಪ್ರಚಾರ ರಾಯಭಾರಿಯಾಗಿ ಬಂದಿದ್ದ ಸಮೀರಾ ತಮ್ಮ ಸಿನಿಮಾಗಳ ಕುರಿತು ಮಾತಿನ ಸರಣಿ ಬಿಚ್ಚಿಟ್ಟರು.

ಏಪ್ರಿಲ್ 27ರಂದು ಬಿಡುಗಡೆಯಾಗಲಿರುವ ಬಹುತಾರಾ ಬಾಲಿವುಡ್ ಚಿತ್ರ 'ತೇಜ್' ಬಗ್ಗೆ ಹುಮ್ಮಸ್ಸಿನಿಂದಲೇ ಮಾತನಾಡಿದ ಈ ಆಂಧ್ರದ ಬೆಡಗಿ, 'ತೇಜ್‌ನಲ್ಲಿ ನನ್ನದು ಸಾಹಸಮಯ ಪಾತ್ರ. ಮೊದಲ ಬಾರಿಗೆ ದೊಡ್ಡ ಬೈಕ್ ಓಡಿಸಿದ್ದು. ಶೂಟಿಂಗ್ ಆರಂಭದಲ್ಲೆ ಕಾಲು ಉಳುಕಿಸಿಕೊಂಡೆ. ಆ ನೋವು ನೆನಪು ಮಾಡಿಕೊಂಡರೆ ಸ್ಟಂಟ್ ಮಾಡುವುದು ಸಾಕೇ ಸಾಕು ಎನಿಸಿಬಿಡುತ್ತದೆ' ಎಂದು ನೋವಿನ ಮುಖ ಮಾಡಿದರು.

"ಬಾಲಿವುಡ್‌ನಲ್ಲಿ ನಟಿಯರಿಗೆ ಈ ತರಹದ ಸಾಹಸಮಯ ಪಾತ್ರ ಸಿಗುವುದು ಬಹಳ ಅಪರೂಪ. ಅಂಥದ್ದರಲ್ಲಿ ನನಗೆ ಈ ಪಾತ್ರ ಸಿಕ್ಕಿದ್ದು ಚೊಕ್ಕವಾಗೇ ಮಾಡಿದ್ದೇನೆ. 'ಬಾಲಿವುಡ್‌ನ ಲಾರಾ ಕ್ರಾಫ್ಟ್' ('ಟೂಮ್ ರೈಡರ್' ಖ್ಯಾತಿ) ಎಂಬ ಹೊಗಳಿಕೆಯೂ ಬಂದಿದೆ. ಸಹನಟ ಅಜಯ್ ದೇವಗನ್ ಈ ಬಿರುದು ನೀಡಿದ್ದು" ಎಂದು ಸಾಕಷ್ಟು ವಿವರಣೆ ಕೊಟ್ಟ ಸಮೀರಾ, 'ಟಾಪಿಕ್ ಬದಲಾಯಿಸೋಣವೇ' ಎಂದರೂ ಮಾತು ಮತ್ತೆ ಮತ್ತೆ ಸಿನಿಮಾ ಕಡೆಯೇ ಹೊರಳಿತು.

'ತೇಜ್' ಚಿತ್ರದಲ್ಲಿ ತನಗೆ ಐಟಮ್ ಸಾಂಗ್ ನೀಡಲಿಲ್ಲ ಎಂದು 29ರ ವಯಸ್ಸಿನ ಸಮೀರಾ ಮುನಿಸಿಕೊಂಡಿದ್ದರಂತೆ. ಅದು ಮಲ್ಲಿಕಾ ಶೆರಾವತ್ ಪಾಲಾದಾಗಲಂತೂ ಶೂಟಿಂಗ್ ವೇಳೆ ಕಾಣಿಸಿಕೊಳ್ಳದೇ ಸುದ್ದಿಗೆ ಇನ್ನಷ್ಟು ಉಪ್ಪು– ಖಾರ ಸೇರುವಂತೆ ಮಾಡಿದ್ದರು. ಈ ಬಗ್ಗೆ ಸಮೀರಾಳನ್ನು ಕೆದಕಲು ಯತ್ನಿಸಿದರೆ ಕಣ್ಣು ಮಿಟುಕಿಸಿ ಕನ್ನಡ ಸಿನಿಮಾದತ್ತ ಮಾತು ಹೊರಳಿಸಿದರು.

'ಸುದೀಪ್ ಜೊತೆ 'ವರದನಾಯಕ' ಚಿತ್ರದಲ್ಲಿ ನಟಿಸುತ್ತಿದ್ದೇನೆ. ಅದರ ಚಿತ್ರೀಕರಣ ನಡೆಯುತ್ತಿದ್ದು ಬೆಂಗಳೂರಲ್ಲೇ ಇದ್ದೇನೆ. ಕನ್ನಡ ಚಿತ್ರಗಳಲ್ಲಿ ನಟಿಸಲು ಇನ್ನಷ್ಟು ಆಹ್ವಾನ ಬಂದರೆ ಖಂಡಿತ ನಟಿಸುವೆ. ಹಾಗೆ ನೋಡಿದರೆ ಬಾಲಿವುಡ್ ನನ್ನ ಪ್ರಥಮ ಆದ್ಯತೆಯಾದರೂ ತಮಿಳು, ತೆಲಗು, ಮಲಯಾಳಂ, ಬೆಂಗಾಲಿ ಸಿನಿಮಾಗಳಲ್ಲಿ ನಟಿಸಿದ್ದೇನೆ' ಎಂದರು 'ಮೈನೆ ದಿಲ್ ತುಜ್‌ಕೊ ದಿಯಾ' ಮೂಲಕ ಬಾಲಿವುಡ್‌ಗೆ ಕಾಲಿಟ್ಟು ತಮಿಳಿನ 'ವಾರಣಂ ಆಯಿರಂ'ನಲ್ಲಿ ಉತ್ತಮ ಅಭಿನಯ ನೀಡಿದ ಈ ಸುಂದರಿ.

'ಕನ್ನಡ ಮಾತನಾಡಲು ಬರುತ್ತದೆಯೇ?' ಎಂದರೆ, 'ನನ್ನ ತಾಯಿ ಮಂಗಳೂರಿನ ಜಿಎಸ್‌ಬಿ. ಕೊಂಕಣಿ ಮತ್ತು ಕನ್ನಡವನ್ನು ಚೆನ್ನಾಗಿ ಮಾತನಾಡುತ್ತಾರೆ. ನನ್ನದು ತಪ್ಪುತಪ್ಪು ಕನ್ನಡ' ಎಂದು ನಕ್ಕರು.

'ಗರ್ಭ ಕೊರಳಿನ ಕ್ಯಾನ್ಸರ್ ಭಾರಿ ಅಪಾಯಕಾರಿ. ಇದಕ್ಕೆ ಕಾರಣವಾದ ಹ್ಯೂಮನ್ ಪ್ಯಾಪಿಲೋಮ ವೈರಸ್ ಲೈಂಗಿಕ ಚಟುವಟಿಕೆ ಮೂಲಕ ಹರಡುತ್ತದಂತೆ. ಲಕ್ಷಣ ಕಾಣಿಸಿಕೊಳ್ಳದೆ ಕೊಲ್ಲುವ ಈ ಕ್ಯಾನ್ಸರ್‌ನಿಂದ ಪಾರಾಗಲು ಲಸಿಕೆ ಹಾಕಿಸಿಕೊಳ್ಳಿ. ನಾನು ಮೇನಲ್ಲಿ ಹಾಕಿಸಿಕೊಳ್ಳುತ್ತೇನೆ' ಎನ್ನುತ್ತ ಕಾದು ನಿಂತಿದ್ದ ಸಹೋದರಿ ಮೇಘನಾ ರೆಡ್ಡಿ ಅವರತ್ತ ನಡೆದರು.

■ ಸುಧಾ ಹೆಗಡೆ

(ಚಿತ್ರ: ಕಿಶೋರ್‌ಕುಮಾರ್ ಬೋಳಾರ್)

